# ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಕಾರ್ಯ ಮತ್ತು ಪಾಲನೆ ವೃತ್ತ ಹುವಿಸಕಂನಿ., ಬೆಳಗಾವಿ

## ಪ್ರಕರಣ ಸಂಖ್ಯೆ: 16/2017

ಹಾಜರಿದ್ದವರು :
1. ಶ್ರೀ.ಗಿರಿಧರ ಕುಲಕರ್ಣಿ, ಅಧೀಕ್ಷಕ ಅಭಿಯಂತರರು(ವಿ) ಹಾಗೂ ಅಧ್ಯಕ್ಷರು.
2. ಶ್ರೀ. ಎಸ್.ಆರ್. ಮಂಜಪ್ಪ, ಉಪಲೆಕ್ಕನಿಯಂತ್ರಣಾಧಿಕಾರಿ, ಸದಸ್ಯರು.
3. ಶ್ರೀ. ಸುನಿಲ್.ಎಸ್ ಸಾಣಿಕೊಪ್ಪ, ವಕೀಲರು, ಸದಸ್ಯರು.

ಶ್ರೀ ಎಸ್. ಎಸ್. ಪಾಟೀಲ,
ವಕೀಲರು,
ಸಿ.ಸಿ.ಬಿ ನಂ-8, ಎನ್‌ಸಿಸಿ, ಆಫೀಸ ಹತ್ತಿರ,
ಜಾಧವ ನಗರ, ಬೆಳಗಾವಿ.

----------ದೂರುದಾರರು

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-1,
ಹುವಿಸಕಂನಿ., ಬೆಳಗಾವಿ.

------------ ಪ್ರತಿವಾದಿ

1. ಶ್ರೀ. ಮಲ್ಲಿಕಾರ್ಜುನ ಪಿ ಕಲಬುರ್ಗಿಮಠ, ವಕೀಲರು, ಸಹ್ಯಾದ್ರಿನಗರ, ಬೆಳಗಾವಿ, ಇವರು <u>ಕೆ.ಇ.ಆರ್.ಸಿ.</u> (ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ ಮತ್ತು ಓಂಬಡ್ಸಮನ್) ನಿಬಂಧನೆಗಳು-2004 ರ ಪ್ರಕಾರ ಒದಗಿಸಿದ ಅವಕಾಶಗಳ ಅಡಿಯಲ್ಲಿ ತಮ್ಮ ದೂರನ್ನು ವೇದಿಕೆಗೆ ಸಲ್ಲಿಸಿರುತ್ತಾರೆ.

### 2. ಪ್ರಕರಣದ ಸಾರಾಂಶ :

ಸ್ಥಾವರ ಸಂಖ್ಯೆ 24.530 ಇದು ಶ್ರೀ. ಜಿ. ಎನ್. ಸಂಬರಗಿಮಠ, ಇವರ ಹೆಸರಿನಲ್ಲಿ ದಿನಾಂಕ 19.10.1985 ರಂದು ಎಲ್‌ಟಿ-2(ಎ) ಜಕಾತಿಯಲ್ಲಿ 3 ಕಿ.ವ್ಯಾ ವಿದ್ಯುತ್ ಮಂಜೂರಾತಿಯೊಂದಿಗೆ ಸರ್ವಿಸ್ ಆಗಿರುತ್ತದೆ. ಸದರಿ ಸ್ಥಾವರವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ(ವಿ), ಎಲ್.ಟಿ ರೇಟಿಂಗ್, ಉಪವಿಭಾಗ, ಬೆಳಗಾವಿ ಇವರು ದಿನಾಂಕ : 04.04.2017 ರಂದು ಪರಿವೀಕ್ಷಣೆ ಮಾಡಿ ಗ್ರಾಹಕರು ಹತ್ತು ಕೊಠಡಿಗಳನ್ನು ವಿದ್ಯಾರ್ಥಿಗಳ ವಸತಿ ನಿಲಯದ ಉದ್ದೇಶಕ್ಕಾಗಿ ಉಪಯೋಗ ಮಾಡುತ್ತಿರುವುದಾಗಿ ವರದಿ ಸಂಖ್ಯೆ : 107330 ದಿನಾಂಕ : 04.04.2017 ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಗರ ಉಪವಿಭಾಗ-1, ಬೆಳಗಾವಿ, ರವರಿಗೆ ವರದಿ ನೀಡಿರುತ್ತಾರೆ. ಸದರಿ ವರದಿಯ ಆಧಾರದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು(ವಿ), ನಗರ ಉಪವಿಭಾಗ-1 ಬೆಳಗಾವಿ ರವರು ತಮ್ಮ ಕಛೇರಿ ಪತ್ರ ಸಂಖ್ಯೆ : 255-56 ದಿನಾಂಕ 22.04.2017 ರಂದು ರೂ. 22771/- ಗಳು ಹಿಂದಾಕರಣೆ ಬಿಲ್ಲು ಪಾವತಿಸಲು ನೋಟಿಸ್ ಜಾರಿಗೊಳಿಸಿರುತ್ತಾರೆ. ಸದರಿ ಹಿಂದಾಕರಣೆ ಬಿಲ್ಲು ಪಾವತಿಸಲು ಆಕ್ಷೇಪಿಸಿ ಈ ಕಛೇರಿಗೆ ದೂರು ಅರ್ಜಿ ಸಲ್ಲಿಸಿರುತ್ತಾರೆ.

### 3. ಗ್ರಾಹಕರ ಪರ ವಕೀಲರ ಹೇಳಿಕೆ :

ಗ್ರಾಹಕರ ಪರ ವಕೀಲರಾದ ಶ್ರೀ ಮಲ್ಲಿಕಾರ್ಜುನ. ಐ. ಕಲಬುರ್ಗಿಮಠ, ಬೆಳಗಾವಿ, ಇವರು ತಮ್ಮ ಹೇಳಿಕೆಯಲ್ಲಿ ಸ್ಥಾವರವು ಶ್ರೀ. ಮಲ್ಲಿಕಾರ್ಜುನ. ಐ. ಕಲಬುರ್ಗಿಮಠ, ಬೆಳಗಾವಿ, ಇವರ ಹೆಸರಿನಲ್ಲಿದ್ದು, ಕಟ್ಟಡವನ್ನು ವಿದ್ಯಾರ್ಥಿ ನಿಲಯಕ್ಕಾಗಿ ಬಳಸುತ್ತಿದ್ದು ಇದರ ಉಸ್ತುವಾರಿಯನ್ನು ಶ್ರೀ ಸೋಮಶೇಖರ್ ಶಿವಾನಂದ ಪಾಟೀಲ, ಜಾಧವ ನಗರ, ಬೆಳಗಾವಿ ಇವರು ನೋಡಿಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ. ಈ ಕಟ್ಟಡದ ಒಡೆತನವು ಶಿವಾಚಾರ್ಯ ಸಂಬರ್ಗಿಮಠ ರವರಿಗೆ ಸೇರಿದ್ದು ಬೆಳಗಾವಿ ನಗರದ ವಿವಿಧ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಕ್ಕಾಗಿ ಈ ಕಟ್ಟಡವನ್ನು ಬಳಸುತ್ತಿರುವುದಾಗಿಯೂ, ವಿದ್ಯಾರ್ಥಿಗಳ ಊಟೋಪಚಾರಕ್ಕೆ ಬೇಕಾದ ಆಹಾರ ಪದಾರ್ಥಗಳನ್ನು ಹೂಲಿ ಮಠದಿಂದ ಸರಬರಾಜು ಮಾಡುತ್ತಿದ್ದು, ಸದರಿ ಮಠದಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆ ನಡೆಯದೇ ಸಾಮಾಜಿಕ ಸೇವೆ ಮಾಡುತ್ತಿದ್ದು, ಇದು ಒಂದು ಧರ್ಮ ಸಂಸ್ಥೆ (Charitable Trust) ಯಾಗಿರುವುದಾಗಿ ತಿಳಿಸಿರುತ್ತಾರೆ.

4. **ಕಂಪನಿ ಪರವಾಗಿ :**

- ***ಶ್ರೀ. ಸುರೇಶ. ಪಿ. ಕೋಲ್ಕಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ(ವಿ), ಕಾ ಮತ್ತು ಪಾ ನಗರ ಉಪವಿಭಾಗ-1, ಹುವಿಸಕಂನಿ., ಬೆಳಗಾವಿ ಇವರ ಹೇಳಿಕೆ:-***

ತಾವು ದಿನಾಂಕ 04.04.2017 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಲ್. ಟಿ ರೇಟಿಂಗ್ ಉಪವಿಭಾಗ, ಬೆಳಗಾವಿ ಇವರಿಂದ ವರದಿ ಸಂಖ್ಯೆ : 107330 ದಿನಾಂಕ 04.04.2017 ರಲ್ಲಿ ಕಟ್ಟಡದಲ್ಲಿನ ಒಟ್ಟು 10 ಕೊಠಡಿಗಳನ್ನು ವಿದ್ಯಾರ್ಥಿ ನಿಲಯ ಉದ್ದೇಶಕ್ಕಾಗಿ ಬಳಸುತ್ತಿದ್ದು ಇದರ ಸಂಪರ್ಕಿತ ಹೊರೆ 750 ವ್ಯಾಟ್ಸ್ ಇರುವುದಾಗಿ ತಿಳಿಸಿದ್ದು ಪ್ರಸ್ತುತ ಚಾಲ್ತಿಯಲ್ಲಿರುವ ವಿದ್ಯುಚ್ಛಕ್ತಿ ದರಗಳ ಅನುಸಾರ ಸ್ಥಾವರವನ್ನು ಎಲ್‌ಟಿ-3 ಜಕಾತಿಯಲ್ಲಿ ಬಿಲ್ಲು ಮಾಡ ಬೇಕಾಗಿರುವುದರಿಂದ **"Conditions of Supply of Distribution Licencees in the State of Karnataka-2004"** ದ **Clause 42.02** ನ **Page No. 97** ರ ಪ್ರಕಾರ ಒಂದು ವರ್ಷದ ಅವಧಿಗೆ ರೂ. 22771/- ಗಳು ಹಿಂದಾಕರಣೆ ಬಿಲ್ಲು ಲೆಕ್ಕಾಚಾರ ಮಾಡಿ ಪತ್ರ ಸಂ. **BGM/AEE/AAO/Rev/SA/255-56** ದಿನಾಂಕ 22.04.2017 ರಲ್ಲಿ ಸ್ಥಾವರದ ಗ್ರಾಹಕರಿಗೆ ಹಿಂಬಿಲ್ಲಿನ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಇಲ್ಲವೇ 30 ದಿನಗಳೊಳಗಾಗಿ ಹಿಂಬಿಲ್ಲು ರೂ. 22771/- ಗಳನ್ನು ಪಾವತಿಸಲು ನೋಟಿಸು ಜಾರಿ ಮಾಡಿರುವುದಾಗಿಯೂ, ಗ್ರಾಹಕರಿಂದ ನೋಟಿಸು ದಿನಾಂಕದಿಂದ 15 ದಿನಗಳೊಳಗೆ ಆಕ್ಷೇಪಣೆ ಬರದೇ ಇರುವುದರಿಂದ ಗ್ರಾಹಕರ ಖಾತೆಗೆ ಬೇಡಿಕೆ ಮಾಡಿದ್ದು ಗ್ರಾಹಕರು ದಿನಾಂಕ 04.08.2017 ರಂದು ಆಕ್ಷೇಪಣೆ ಸಲ್ಲಿಸಿದ್ದು, ಆಕ್ಷೇಪಣೆಗಳನ್ನು ಅವಧಿಯೊಳಗೆ ಸಲ್ಲಿಸದಿರುವುದರಿಂದ ಪರಿಗಣಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

- ಶ್ರೀ. ಪ್ರಮೋದ ಎಸ್. ಮರಡಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಲ್‌ಟಿ ರೇಟಿಂಗ್, ಉಪವಿಭಾಗ, ಬೆಳಗಾವಿ ರವರು ತಾವು ಲಭ್ಯವಿರುವ ದಾಖಲೆಗಳ ಆಧಾರದಲ್ಲಿ ವರದಿ ನೀಡಿರುವುದಾಗಿ ತಿಳಿಸಿರುತ್ತಾರೆ.

- ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ : ಬೆ/ಅಅ(ವಿ)/ಉಲೆನಿ/ಸಲೆ/ಸಿಜಿಆರ್‌ಎಫ್/2018-19/5866 ದಿನಾಂಕ 12.11.2018 ರಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಗರ ವಿಭಾಗ, ಬೆಳಗಾವಿ ರವರಿಗೆ ಸದರಿ ಪ್ರಕರಣದ ಬಗ್ಗೆ ವರದಿ ನೀಡಲು ಪತ್ರ ಬರೆಯಲಾಗಿದ್ದು ಶ್ರೀ. ಎಂ. ಟಿ. ಅಪ್ಪಣ್ಣವರ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಗರ ವಿಭಾಗ, ಬೆಳಗಾವಿ ರವರು ಸಲ್ಲಿಸಿರುವ ಪತ್ರ ಸಂಖ್ಯೆ : ಬೆನ/ಕಾನಿಇಂ(ವಿ)/ಲೆ/ಸಲೆ/ಹಿಸ(ಕಂ)/18-19/8931 ದಿನಾಂಕ : 05.12.2018 ರ ವರದಿಯಲ್ಲಿನ ವಿವರಗಳು ಈ ರೀತಿ ಇರುತ್ತದೆ :

- ಸದರಿ ವಸತಿ ನಿಲಯದಲ್ಲಿ 10 ಕೊಠಡಿಗಳು ಇದ್ದು ಗರಿಷ್ಟ 21 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದ್ದು ಸದ್ಯ 15 ವಿದ್ಯಾರ್ಥಿಗಳು ವಾಸವಾಗಿರುತ್ತಾರೆ ಭೇಟಿ ನೀಡಿದ ಸಂದರ್ಭದಲ್ಲಿ ಒಟ್ಟು ಆರು ವಿದ್ಯಾರ್ಥಿಗಳನ್ನು ವಿಚಾರಿಸಿದ್ದು, ಶ್ರೀ. ಎಸ್. ಎಸ್. ಪಾಟೀಲ ರವರು ವಿದ್ಯಾರ್ಥಿ ನಿಲಯದ ಕಾರ್ಯದರ್ಶಿಯಾಗಿದ್ದು ನಿರ್ವಹಣೆಯ ಕಾರ್ಯವನ್ನು ವಹಿಸಿಕೊಂಡಿದ್ದು ವಿದ್ಯಾರ್ಥಿ ನಿಲಯದಲ್ಲಿ ವಾಸಿಸುವ ವಿದ್ಯಾರ್ಥಿಗಳಿಂದ ಭದ್ರತಾ ಠೇವಣಿಯಾಗಿ ರೂ. 5000/- ಗಳನ್ನು ಪಡೆದುಕೊಂಡಿದ್ದು. ವಿದ್ಯಾರ್ಥಿಗಳು ನಿಲಯವನ್ನು ಬಿಟ್ಟು ಹೋಗುವಾಗ ರೂ. 5000/-ಗಳನ್ನು ಹಿಂದಿರುಗಿಸುವುದಾಗಿ ತಿಳಿಸಿರುತ್ತಾರೆ. ವಿದ್ಯಾರ್ಥಿಗಳಿಂದ ಕೊಠಡಿಗಳ ಬಾಡಿಗೆ ಪಡೆದುಕೊಳ್ಳುವುದಿಲ್ಲಾವೆಂದೂ ಹಾಗೂ ಪ್ರತಿ ತಿಂಗಳಗೂ ರೂ. 1100/- ಗಳನ್ನು ಊಟಕ್ಕೆ ಪಡೆಯುತ್ತಾರೆ ಎಂದು ತಿಳಿದು ಬಂದಿರುವುದಾಗಿ ತಿಳಿಸಿರುತ್ತಾರೆ. ಆಹಾರ ಪದಾರ್ಥಗಳನ್ನು ಹೂಲಿ ಮಠದಿಂದ ಕೊಡುತ್ತಿರುವದಾಗಿವರೂ ಹಾಗೂ ನೊಂದಾಯಿತ ಗ್ರಾಹಕರಾದ ಶ್ರೀ. ಜಿ. ಎನ್. ಸಂಬರ್ಗಿಮಠ ರವರು ಮರಣ ಹೊಂದಿದ ವಿಷಯ ವಿದ್ಯಾರ್ಥಿಗಳಿಂದ ತಿಳಿದು ಬಂದಿರುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿ ಸಂಸ್ಥೆಯ ನಿರ್ವಾಹಣೆಗಾರರಿಂದ ಗ್ರಾಹಕರ ಹೆಸರು ಇದುವರೆಗೂ ಬದಲಾವಣೆ ಮಾಡಿಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮೇಲ್ನೋಟಕ್ಕೆ ಸದರಿ ಉಚಿತ ಪ್ರಸಾದ ನಿಲಯವನ್ನು ವಾಣಿಜ್ಯ ಪೂರಕವಾಗಿ ಬಳಸುತ್ತಿಲ್ಲವೆಂದು ಸ್ಪಷ್ಟವಾಗಿ ಕಂಡುಬರುತ್ತದೆ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಉಚಿತ ವಿದ್ಯಾರ್ಥಿ ನಿಲಯವನ್ನು ನಡೆಸುತ್ತಿರುವುದಾಗಿ ಕಂಡುಬಂದಿರುತ್ತದೆಯೆಂದು ವರದಿ ನೀಡಿರುತ್ತಾರೆ.

೮. ಕಾರ್ಯನಿರ್ವಾಹಕ ಇಂಜನಿಯರ್(ವಿ), ನಗರ ವಿಭಾಗ, ಬೆಳಗಾವಿ ರವರು ತಮ್ಮ ಪತ್ರದಲ್ಲಿ ಸದರಿ ನಿಲಯದಲ್ಲಿ ಮೇಲ್ನೋಟಕೆ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿಲ್ಲವೆಂದೂ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಉಚಿತ ವಿದ್ಯಾರ್ಥಿ ನಿಲಯವನ್ನು ನಡೆಸುತ್ತಿರುವುದು ಕಂಡು ಬಂದಿರುವುದಾಗಿ ತಿಳಿಸಿರುತ್ತಾರೆ.

೯. ಹುವಿಸಕಂನಿ, ವಿದ್ಯುಚ್ಛಕ್ತಿ ದರಗಳು-2018 ರ ಪ್ರಕಾರ ಎಲ್‌ಟಿ-2(ಎ) ಜಕಾತಿಯು ಸರ್ಕಾರ, ಎಜ್ಯುಕೇಶನ್ ಸಂಸ್ಥೆಗಳು, ಕಲ್ಚರಲ್, ಸೈಂಟಿಫಿಕ್ ಮತ್ತು ಚಾರಿಟೇಬಲ್ ಸಂಸ್ಥೆಗಳು ನಡೆಸುವ ಹಾಸ್ಟೇಲ್‌ಗಳಿಗೆ ಅನ್ವಯಿಸುತ್ತದೆ.

6. **ವೇದಿಕೆಯ ಸದಸ್ಯರುಗಳ ಅಭಿಪ್ರಾಯ:**

1. ನೋಂದಾಯಿತ ಗ್ರಾಹಕರು ಮರಣ ಹೊಂದಿದ್ದು ಸ್ಥಾವರದ ಹೆಸರು ಬದಲಾವಣೆಯಾಗದೇ ಇರುವುದರಿಂದ ಶ್ರೀ. ಎಸ್. ಎಸ್. ಪಾಟೀಲರು, ವಕೀಲರು ಇವರು ಸಲ್ಲಿಸಿರುವ ದೂರನ್ನು ಪರಿಗಣಿಸಲಾಗುವುದಿಲ್ಲ.
2. ಶ್ರೀ. ಎಸ್. ಎಸ್. ಪಾಟೀಲ್, ವಕೀಲರು ಇವರ ಪರ ವಕೀಲರು ತಿಳಿಸಿದಂತೆ ಹಾಗೂ ಶ್ರೀ. ಎಂ. ಓ. ಅಪ್ಪಣ್ಣವರ ಕಾರ್ಯನಿರ್ವಾಹಕ ಇಂಜನಿಯರ್(ವಿ), ನಗರ ವಿಭಾಗ, ಬೆಳಗಾವಿ ಇವರ ವರದಿಯನ್ವಯ ಸದರಿ ಸ್ಥಾವರದ ಕಟ್ಟಡದಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆ ನಡೆಯುತ್ತಿಲ್ಲವೆಂಬುವದನ್ನು ಒಪ್ಪಿಕೊಳ್ಳಲಾಗಿದೆ.
3. ಸ್ಥಾವರವನ್ನು ಆರ್ಥಿಕವಾಗಿ ಹಿಂದುಳಿದಿರುವ ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಡೆಸುತ್ತಿದ್ದಲ್ಲಿ ಹುವಿಸಕಂನಿ ವಿದ್ಯುಚ್ಛಕ್ತಿ ದರಗಳು-2017 ರ ಪ್ರಕಾರ (ಪುಟ ಸಂಖ್ಯೆ 32 ) ಸರ್ಕಾರ, ಎಜ್ಯುಕೇಶನ್ ಸಂಸ್ಥೆಗಳು, ಕಲ್ಚರಲ್, ಸೈಂಟಿಫಿಕ್ ಮತ್ತು ಚಾರಿಟೇಬಲ್ ಸಂಸ್ಥೆಗಳು ನಡೆಸುವ ಹಾಸ್ಟೇಲ್‌ಗಳನ್ನು ಎಲ್‌ಟಿ-2(ಎ) ಜಕಾತಿಯಲ್ಲಿ ಬಿಲ್ಲು ಮಾಡಬೇಕಾಗಿರುತ್ತದೆ. ಆದರೆ ಸದರಿ ಪ್ರಕರಣದಲ್ಲಿ ಸರ್ಕಾರ, ಎಜ್ಯುಕೇಶನ್ ಸಂಸ್ಥೆಗಳು, ಕಲ್ಚರಲ್, ಸೈಂಟಿಫಿಕ್ ಮತ್ತು ಚಾರಿಟೇಬಲ್ ಸಂಸ್ಥೆಗಳು ನಡೆಸುವ ಹಾಸ್ಟೇಲುಗಳ ಬಗ್ಗೆ ದಾಖಲೆಗಳನ್ನು ವೇದಿಕೆಗೆ ಅರ್ಜಿದಾರರು ಸಲ್ಲಿಸಿರುವುದಿಲ್ಲ.
4. ಹುವಿಸಕಂನಿ, ವಿದ್ಯುಚ್ಛಕ್ತಿ ದರಗಳು-2017 (ಪುಟ ಸಂಖ್ಯೆ 37) ರ ಪ್ರಕಾರ ಎಲ್‌ಟಿ-2(ಎ) ಪ್ರವರ್ಗದಲ್ಲಿ ಸೇರಿಸಲಾಗಿರದ ಖಾಸಗಿ ಹಾಸ್ಟೇಲುಗಳನ್ನು ಎಲ್‌ಟಿ-3 ಜಕಾತಿಯಲ್ಲಿ ಬಿಲ್ಲು ಮಾಡಬೇಕಾಗಿರುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳು ಹಾಗೂ ಹೇಳಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

## ಆದೇಶ

ಆದೇಶ ಸಂಖ್ಯೆ.ಬೆ/ಗ್ರಾವೇ/ಪ್ರ.ಸ.16/2018-19/ 3516-23 ದಿನಾಂಕ : 28.12.2018

ಸ್ಥಾವರ ಸಂಖ್ಯೆ 24.530 ಕ್ಕೆ ಆಕರಿಸಿರುವ ಹಿಂದಾಕರಣೆ ಬಿಲ್ಲು ರೂ. 22771/- ಗಳು ಕ್ರಮ ಬದ್ಧವಾಗಿದ್ದು ನಿಯಮಾನುಸ್ಸಾರ ಬಡ್ಡಿಯೊಂದಿಗೆ ವಸೂಲಿ ಮಾಡಲು ಆದೇಶಿಸಿದೆ.

| | | |
|---|---|---|
| (ಎಸ್. ಎನ್. ಸಾಣಿಕೊಪ್ಪ) | (ಎಸ್.ಆರ್. ಮಂಜಪ್ಪ) | (ಗಿರಿಧರ ಕುಲಕರ್ಣಿ) |
| ವಕೀಲರು | ಉಪಲೆಕ್ಕನಿಯಂತ್ರಣಾಧಿಕಾರಿ | ಅಧೀಕ್ಷಕ ಅಭಿಯಂತರರು(ವಿ) |
| ಸದಸ್ಯರು | ಸದಸ್ಯರು, | ಅಧ್ಯಕ್ಷರು, |

**ಪ್ರತಿ:**

1. ಆರ್ಥಿಕ ಸಲಹೆಗಾರರು, ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ.
2. ಮುಖ್ಯ ಅಭಿಯಂತರರು(ವಿ) ಬೆಳಗಾವಿ ವಲಯ ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ.
3. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)/(ಆಡಳಿತ ಮತ್ತು ಮಾಸಂಅ) ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ
4. ನಿಯಂತ್ರಣಾಧಿಕಾರಿ(ಆಂ.ಪ) ನಿಗಮ ಕಚೇರಿ ಹುವಿಸಕಂನಿ., ನವನಗರ ಹುಬ್ಬಳ್ಳಿ ರವರ ಮಾಹಿತಿಗಾಗಿ
5. ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ವಿಭಾಗ ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ಉಪವಿಭಾಗ-1, ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಎಲ್.ಟಿ.ಎಂ.ಆರ್ ನಗರ ಉಪವಿಭಾಗ, ಹುವಿಸಕಂನಿ., ಬೆಳಗಾವಿ ರವರ ಮಾಹಿತಿಗಾಗಿ
8. ಆಪ್ತ ಕಾರ್ಯದರ್ಶಿ, ಓಂಬಡ್ಸಮನ್, ಕೆ.ಇ.ಆರ್.ಸಿ, 6 ಮತ್ತು 7 ನೇ ಮಹಡಿ, ಮಹಾಲಕ್ಷ್ಮೀ ಚೇಂಬರ್ಸ, ನಂ:9/2, ಎಂ.ಜಿ. ರೋಡ, ಬೆಂಗಳೂರು. ಸದರಿ ಮಾಹಿತಿಯನ್ನು ಓಂಬಡ್ಸಮನ್, ಕೆ.ಇ.ಆರ್.ಸಿ, ಬೆಂಗಳೂರು ರವರ ಗಮನಕ್ಕೆ ತರುವುದು.
9. ಶ್ರೀ ಎಸ್.ಎಸ್. ಪಾಟೀಲ, ವಕೀಲರು, ಸಿ.ಸಿ.ಬಿ ನಂ-8, ಎನ್‌ಸಿಸಿ, ಆಫೀಸ್ ಹತ್ತಿರ, ಜಾಧವ ನಗರ, ಬೆಳಗಾವಿ,

5. **ವೇದಿಕೆಯು ಗಮನಿಸಿರುವ ಅಂಶಗಳು:**

1. ಸ್ಥಾವರ ಸಂಖ್ಯೆ 24.530 ಸ್ಥಾವರವು ಎಲ್‌ಟಿ-2 ಜಕಾತಿಯಲ್ಲಿ 3.00 ಕಿ.ವ್ಯಾ. ಸಂಪರ್ಕಿತ ಹೊರೆಯೊಂದಿಗೆ ಗ್ರಾಹಕರಾದ ಶ್ರೀ. ಜಿ. ಎಮ್. ಸಂಬರ್ಗಿಮಠ ಎನ್ನುವವರ ಹೆಸರಿನಲ್ಲಿ ದಿನಾಂಕ : 19.10.2015 ರಂದು ಸರ್ವೀಸ್ ಆಗಿರುತ್ತದೆ.
2. ಸ್ಥಾವರವು ಶ್ರೀ. ಜಿ. ಎಮ್. ಸಂಬರ್ಗಿಮಠ ಎನ್ನುವವರ ಹೆಸರಿನಲ್ಲಿದ್ದು ಸದರಿಯವರು ಮರಣ ಹೊಂದಿರುತ್ತಾರೆ. ನಂತರ ಸ್ಥಾವರದ ಖಾತೆ ಬದಲಾವಣೆಯಾಗಿರುವುದಿಲ್ಲ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಎಲ್.ಟಿ.ರೇಟಿಂಗ್ ಉಪವಿಭಾಗ, ಬೆಳಗಾವಿ ರವರು ದಿನಾಂಕ : 04.04.2017 ರಂದು ಸ್ಥಾವರವನ್ನು ಪರಿವೀಕ್ಷಣೆ ಮಾಡಿದ್ದು ಸದರಿ ಕಟ್ಟಡದಲ್ಲಿನ 10 ಕೊಠಡಿಗಳನ್ನು ವಿದ್ಯಾರ್ಥಿ ನಿಲಯದ ಉಪಯೋಗಕ್ಕಾಗಿ ಬಳಸುತ್ತಿದು, ಈ 10 ಕೊಠಡಿಗಳ ಸಂಪರ್ಕಿತ ವಿದ್ಯುತ್ ಹೊರೆ 750 ವ್ಯಾಟ್ಸ್‌ಗಳು ಇರುವುದಾಗಿ ತಮ್ಮ ವರದಿ ಸಂಖ್ಯೆ 107330 ದಿನಾಂಕ : 04.04.2017 ರಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಗರ ಉಪವಿಭಾಗ-1, ಬೆಳಗಾವಿ ರವರಿಗೆ ವರದಿ ನೀಡಿರುತ್ತಾರೆ.
4. ಸಕಾನಿಇಂ(ವಿ), ನಗರ ಉಪವಿಭಾಗ-1, ಬೆಳಗಾವಿ ರವರು **"Conditions of Supply of Distribution Licencees in the State of Karnataka-2004"** ದ **Clause 42.02** ನ **Page No. 97** ರ ಪ್ರಕಾರ ಪರಿವೀಕ್ಷಣೆ ದಿನಾಂಕದ ಹಿಂದಿನ ಹನ್ನೆರಡು ತಿಂಗಳು (ಒಂದು ವರ್ಷ)ಗಳ ಅವಧಿಗೆ ರೂ. 22771/- ಗಳು ಹಿಂದಾಕರಣೆ ಬಿಲ್ಲು ಲೆಕ್ಕಾಚಾರ ಮಾಡಿ ಪತ್ರ ಸಂ. **BGM/AEE/AAO/Rev/SA/255-56** ದಿನಾಂಕ : 22.04.2017 ರಲ್ಲಿ ಗ್ರಾಹಕರಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಇಲ್ಲವೇ ನೋಟಿಸು ತಲುಪಿದ 30 ದಿನಗಳೊಳಗಾಗಿ ಹಿಂದಾಕರಣೆ ಬಿಲ್ಲು ಪಾವತಿಸಲು ಪತ್ರ ಬರೆದಿರುತ್ತಾರೆ.
5. ಶ್ರೀ. ಎಸ್. ಎಸ್. ಪಾಟೀಲ, ವಕೀಲರು, ಸಿ.ಸಿ.ಬಿ ನಂ. 8, ಎನ್. ಸಿ.ಸಿ ಆಫೀಸ್ ಹತ್ತಿರ, ಜಾಧವ ನಗರ, ಬೆಳಗಾವಿ ಇವರು ದಿನಾಂಕ : 04.08.2017 ರಲ್ಲಿ ನಗರ ಉಪವಿಭಾಗ-1 ಕ್ಕೆ ಅರ್ಜಿ ಸಲ್ಲಿಸಿ ಸ್ಥಾವರ ಸಂಖ್ಯೆ : 24.530 ಇದು ಬಿ.ಎಮ್. ಕಂಕಣವಾಡಿ ಆಯುರ್ವೇದ ಮಹಾವಿದ್ಯಾನಿಲಯ ಪ್ರಾರಂಭವಾದಾಗಿನಿಂದಲೂ ಆಸ್ತಿತ್ವದಲ್ಲಿದ್ದು ಇದು ಉಚಿತ ಪ್ರಸಾದ ನಿಲಯವಾಗಿದ್ದು ಇದರ ಮೂಲ ಸಂಸ್ಥಾಪಕರಾದ ಶ್ರೀ. ಸಂಗಮೇಶ್ವರ ಸ್ವಾಮಿಗಳ ಸಾಂಬಯ್ಯನಮಠ ಇವರು ಏಪ್ರೀಲ್-2017 ರಲ್ಲಿ ಶಿವಾಧೀನರಾಗಿದ್ದು ನಂತರ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಶ್ರೀ ಸಂಬರ್ಗಿಮಠ ಇವರು ಕೂಡಾ ನಿಧನ ಹೊಂದಿರುವುದರಿಂದ ಅರ್ಜಿದಾರರಾದ ಶ್ರೀ. ಎಸ್. ಎಸ್. ಪಾಟೀಲ ರವರೇ ಉಸ್ತುವಾರಿ ನೋಡಿಕೊಳ್ಳುವುದಾಗಿಯೂ ಹಾಗೂ ಇದು ಉಚಿತ ಪ್ರಸಾದ ನಿಲಯವಾಗಿದ್ದು ಇಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆ ನಡೆಯುವುದಿಲ್ಲವೆಂದೂ, ಆದರೆ ಹೆಸ್ಕಾಂನ ಸಿಬ್ಬಂದಿ ( ಮೀಟರ್ ರೀಡರ್) ಇವರು ಕಮರ್ಷಿಯಲ್ ಇರುವುದಾಗಿ ರೂ. 22000/- ಗಳ ಬಿಲ್ಲು ನೀಡಿದ್ದು ಇದರ ಬಗ್ಗೆ ತಮಗೆ ಯಾವುದೇ ನೋಟಿಸು ಸಿಕ್ಕಿರುವುದಿಲ್ಲವೆಂದೂ ಹಾಗೂ ಬಿಲ್ಲಿನ ಮಾತ್ತವನ್ನು ಕಡಿಮೆ ಮಾಡಲು ಕೋರಿ ದಿನಾಂಕ : 04.08.2017 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಗರ ಉಪವಿಭಾಗ-1, ಬೆಳಗಾವಿಗೆ ಅರ್ಜಿ ಸಲ್ಲಿಸಿರುತ್ತಾರೆ.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಗರ ಉಪವಿಭಾಗ-1, ಬೆಳಗಾವಿ ರವರು **"Conditions of Supply of Distribution Licencees in the State of Karnataka-2004"** ದ **Clause 42.07(1)** ರ ಪ್ರಕಾರ ಗ್ರಾಹಕರಿಗೆ ಪತ್ರ ಬರೆದಿರುತ್ತಾರೆ. ಆದರೆ **Clause 42.07(3)** ರ ಪ್ರಕಾರ ಗ್ರಾಹಕರು ಕ್ರಮ ವಹಿಸದೇ ಇರುವುದು ಕಂಡು ಬಂದಿರುತ್ತದೆ.
7. ಗ್ರಾಹಕರ ಪರ ವಕೀಲರು ಸ್ಥಾವರದ ಆವರಣದಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆ ನಡೆಯದೇ ಬೆಳಗಾವಿಯ ವಿವಿಧ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಉಚಿತ ಪ್ರಸಾದ ನಿಲಯ ನಡೆಸುತ್ತಿದ್ದು ಇದು ಒಂದು **Charitable institute** ಎಂದು ತಮ್ಮ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಆದರೆ ಸದರಿಯವರು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಯಾವುದೇ ದಾಖಲೆ ಒದಗಿಸದೇ ಈ ಬಗ್ಗೆ Affidavit ಮಾತ್ರ ಸಲ್ಲಿಸಿರುತ್ತಾರೆ.